

## ಕಲ್ಲಿನ ಸರಪಳಿ

ತಲಕಾಡಿನಲ್ಲಿ ಪಂಚಲಿಂಗಗಳ ದರ್ಶನ ಬಹು ಪ್ರಸಿದ್ಧ. ಅವುಗಳಲ್ಲಿ ಒಂದಾದ ಶ್ರೀ ವೈದ್ಯೇಶ್ವರ ದೇವಾಲಯ ಗಂಗ–ಚೋಳರ ಕಾಲದ್ದಾಗಿದ್ದು, ದ್ರಾವಿಡ ಶೈಲಿಯಲ್ಲಿದೆ. ನಂತರ ವಿಜಯನಗರ ಶೈಲಿಯಲ್ಲಿ ವಿಸ್ತರಣೆಗೊಂಡಿದೆ. ತಳವಿನ್ಯಾಸ ಶೈಲಿ, ಗರ್ಭಗೃಹ, ಅಂತರಾಳ, ಅರ್ಧಮಂಟಪ ಮತ್ತು ಮಹಾಮಂಟಪಗಳನ್ನು ಹೊಂದಿದ್ದು, ಅದ್ಭುತವಾದ ಶಿಲ್ಪಕಲೆಯನ್ನು ಹೊಂದಿದೆ. ಹೊರಭಿತ್ತಿಯ ಮೇಲೆ 5 ಹೆಡೆಯ ನಾಗನ ಕೊರಳಲ್ಲಿ ಇಳಿಬಿದ್ದಿರುವ ಕಲ್ಲಿನ ಸರಪಳಿ ಮನಸೆಳೆಯುವಂತಿದೆ.

**–ಸೀತಾ ಎಸ್.ಎನ್., ಹರಿಹರ**



## ಕರ್ಪೂರ ಬೆಂಕಿ ಕುಣಿತ

ಕುಂದಾಪುರ ಪೇಟೆ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ವರ್ಷಂಪ್ರತಿ ಮಾರ್ಗಶಿರ ಮಾಸದಲ್ಲಿ ಏಳು ದಿನಗಳ ಕಾಲ ಅಖಂಡ ಭಜನಾ ಸಪ್ತಾಹ ಜರಗುತ್ತದೆ. ಸಪ್ತಾಹದ ಕೊನೆಯ ದಿನವಾದ ಗೀತಾಜಯಂತಿಯಂದು ಮಧ್ಯರಾತ್ರಿ ಕರ್ಪೂರದ ದೊಡ್ಡ ರಾಶಿಗೆ ಬೆಂಕಿ ಹಾಕಿ 'ಹರಿ ವಿಠಲ್ ಜೈ ವಿಠಲ್' ಎನ್ನುತ್ತ ಭಕ್ತಾದಿಗಳು ಅದರ ಸುತ್ತ ಕುಣಿಯುತ್ತಾರೆ. ಬೆಂಕಿ ಶಮನವಾಗುತ್ತಿದ್ದಂತೆ ಭಜಕರು ಉರುಳುಸೇವೆಗೆ ತೆರಳುತ್ತಾರೆ. ಇಂತಹ ಅಪೂರ್ವ ಕುಣಿತ ಬೇರೆಲ್ಲೂ ಕಂಡುಬರುವುದಿಲ್ಲ.

**– ಪಿ.ಜಯವಂತ ಪೈ, ಕುಂದಾಪುರ**

## ಪೆರಂಪಳ್ಳಿಯ ಗೋಪುರ!

ಉಡುಪಿ–ಮಣಿಪಾಲ ಹಾದಿಯ ಪೆರಂಪಳ್ಳಿ ಎಂಬಲ್ಲಿ ಕಳೆದ ಏಳು ವರ್ಷಗಳಿಂದ ನಿರ್ಮಾಣಗೊಳ್ಳುತ್ತಿದ್ದ ಫಾತಿಮಾ ಮಾತೆಯ ಬೃಹತ್ ಚರ್ಚ್ ಪ್ರಾರ್ಥನೆಗೆ ತೆರೆದಿದೆ. ಇಲ್ಲಿಯ ವಿಶೇಷವೆಂದರೆ ಚರ್ಚ್ ಹೊರಗಡೆ ಕಟ್ಟಲಾಗಿರುವ ಗಂಟೆ ಗೋಪುರ ! ಯಾಕೆಂದರೆ ಅದನ್ನು ಜಗತ್ಪ್ರಸಿದ್ಧ ಪೀಸಾ ಗೋಪುರದಂತೆ ನಿರ್ಮಿಸಲಾಗಿದೆ. 10 ಅಡಿ ವೃತ್ತಾಕಾರದಲ್ಲಿ ಏಳು ಮಹಡಿಗಳ ತುಸು ವಾಲಿದಂತಿರುವ ಗೋಪುರದ ಯೋಜನೆ ಖುದ್ದು ಅಲ್ಲಿನ ಫಾದರ್ ರೋಮಿಯೋ ಲುವಿಸ್ ಅವರದ್ದು. ಅದಕ್ಕಾಗಿಯೇ ಆಕರ್ಷಕ ಭಾರಿ ಗಂಟೆಯೊಂದನ್ನು ಆಸ್ಟ್ರಿಯಾದಿಂದ ತರಿಸಿದ್ದಾರೆ. ರಾತ್ರಿ ಹೊತ್ತು ಏಳು ಮಹಡಿಗಳು ಏಳು ಬಣ್ಣಗಳಿಂದ ಕಂಗೊಳಿಸುತ್ತಿವೆ. ಪ್ರವಾಸಿ ತಾಣವನ್ನಾಗಿ ಮಾಡುವ ಆಲೋಚನೆ ಧರ್ಮಗುರುಗಳದ್ದು ಎಂದು ಹೇಳಲಾಗುತ್ತಿದೆ.

**–ಜಗಜೀವನ್ ಶೆಟ್ಟಿ ಎಂ. ಉಡುಪಿ**

